# ಕರ್ನಾಟಕ ಜೀವವೈವಿಧ್ಯ ಮಂಡಳಿ

## 46ನೇ ಮಂಡಳಿ ಸಭೆಯ ನಡವಳಿ

### ಸ್ಥಳ:ಸಭಾ ಕೊಠಡಿ, ನೆಲಮಹಡಿ, ವನವಿಕಾಸ ಕಟ್ಟಡ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು

*******************************************************************************

46ನೇ ಮಂಡಳಿ ಸಭೆಯನ್ನು ದಿನಾಂಕ 28/01/2021ರಂದು ಬೆಳಗ್ಗೆ 11.00 ಗಂಟೆಗೆ ಕರ್ನಾಟಕ ಜೀವವೈವಿಧ್ಯ ಮಂಡಳಿ, ನೆಲಮಹಡಿ, ವನವಿಕಾಸ ಕಟ್ಟಡ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಹಮ್ಮಿಕೊಳ್ಳಲಾಯಿತು.

ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು :

| | | |
|---|---|---|
| 1 | ಶ್ರೀ ಅನಂತ ಹೆಗಡೆ ಅಶೀಸರ, ಕರ್ನಾಟಕ ಜೀವವೈವಿಧ್ಯ ಮಂಡಳಿ, ಬೆಂಗಳೂರು. | ಮಾನ್ಯ ಅಧ್ಯಕ್ಷರು |
| 2 | ಶ್ರೀ ರಾಜಕುಮಾರ್ ಖತ್ರಿ, ಭಾ.ಆ.ಸೇ. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು. ಪ್ರತಿನಿಧಿಸಿದವರು. ಡಾ. ಬಿ.ಪಿ. ಲಕ್ಮೀಕಾಂತ. | ಪದನಿಮಿತ್ತ ಸದಸ್ಯರು |
| 3 | ಶ್ರೀ. ಸಂಜಯ್ ಮೋಹನ್, ಭಾ.ಅ.ಸೇ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ (ಅರಣ್ಯಪಡೆ ಮುಖ್ಯಸ್ಥರು), ಅರಣ್ಯ ಭವನ, ಬೆಂಗಳೂರು | ಪದನಿಮಿತ್ತ ಸದಸ್ಯರು |
| 4 | ಶ್ರೀ ಬ್ರಿಜೇಶ್ ಕುಮಾರ್, ಭಾ.ಅ.ಸೇ. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ಜೀವಿಪರಿಸ್ಥಿತಿ ಮತ್ತು ಪರಿಸರ) ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ,ಬೆಂಗಳೂರು | ಪದನಿಮಿತ್ತ ಸದಸ್ಯರು |
| 5 | ಶ್ರೀಮತಿ ಮೀನಾಕ್ಷಿ ನೇಗಿ, ಭಾ.ಅ.ಸೇ. ಆಯುಕ್ತರು, ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ ಆಯುಷ್) ಇಲಾಖೆ ಬೆಂಗಳೂರು-09 (ಪದನಿಮಿತ್ತ ಸದಸ್ಯರು). | ಪದನಿಮಿತ್ತ ಸದಸ್ಯರು |
| 6 | ಡಾ.ಸಿ.ಜಿ.ಕುಶಾಲಪ್ಪ, ಡೀನ್ ಫಾರೆಸ್ಟರಿ, ಕಾಲೇಜ್ ಆಫ್ ಫಾರೆಸ್ಟರಿ, ಪೊನ್ನಂಪೇಟೆ,ಕೊಡಗು | ಅಧಿಕಾರೇತರ ಸದಸ್ಯರು |
| 7 | ಡಾ. ಪ್ರಕಾಶ್ ಮೇಸ್ತಾ, ಏಸು ಬಂದರು, ಕೆಳಗಿನಪಾಳ್ಯ, ಉತ್ತರಕನ್ನಡ | ಅಧಿಕಾರೇತರ ಸದಸ್ಯರು |
| 8 | ಶ್ರೀ ಕೆ. ವೆಂಕಟೇಶ್, ಕೋ-ಆರ್ಡಿನೇಟರ್, ಗ್ರಾಮೀಣ ಸಮುದಾಯ ವಿಜ್ಞಾನ ಕೇಂದ್ರ, ಶಿವಮೊಗ್ಗ | ಅಧಿಕಾರೇತರ ಸದಸ್ಯರು |
| 9 | ಶ್ರೀಮತಿ. ಅನಿತಾ ಅರೆಕಲ್, ಭಾ.ಅ.ಸೇ, ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಸಾಮಾಜಿಕ ಅರಣ್ಯ), ಅರಣ್ಯ ಭವನ, ಬೆಂಗಳೂರು ಪ್ರತಿನಿಧಿಸಿದವರು ಶ್ರೀ ಚಂದ್ರಪ್ರಭ, (ನಿವೃತ್ತ) ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಸಮಾಲೋಚಕರು (ಸಾಮಾಜಿಕ ಅರಣ್ಯ). | ವಿಶೇಷ ಆಹ್ವಾನಿತರು |
| 10 | ಶ್ರೀಬಿ.ಟಿ.ಖಾನಾಪುರೆ, ಡ್ರಗ್ಸ್ ಕಂಟ್ರೋಲರ್, ಡ್ರಗ್ಸ್ ಕಂಟ್ರೋಲ್ ಡಿಪಾರ್ಟ್‌ಮೆಂಟ್, ಬೆಂಗಳೂರು ಪ್ರತಿನಿಧಿಸಿದವರು ಶ್ರೀ ವೆಂಕಟೇಶ್, ಸಹಾಯಕ ಡ್ರಗ್ಸ್ ಕಂಟ್ರೋಲರ್. | ವಿಶೇಷ ಆಹ್ವಾನಿತರು |
| 11 | ಶ್ರೀ ಪುನೀತ್ ಪಾಠಕ್, ಭಾ.ಅ.ಸೇ ಸದಸ್ಯ ಕಾರ್ಯದರ್ಶಿ, ಕರ್ನಾಟಕ ಜೀವವೈವಿಧ್ಯ ಮಂಡಳಿ, ಬೆಂಗಳೂರು. | ಸಂಚಾಲಕರು |

ಕೆಳಗಿನ ಸದಸ್ಯರಿಗೆ ಅನುಪಸ್ಥಿತಿಯ ರಜೆ ನೀಡಲಾಯಿತು.

| | | |
|---|---|---|
| 1 | ಶ್ರೀ ಸಂದೀಪ್ ದವೇ, ಭಾ.ಆ.ಸೇ.ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬೆಂಗಳೂರು | ಪದನಿಮಿತ್ತ ಸದಸ್ಯರು |
| 2 | ಡಾ.ಹರಿಣಿ ನಾಗೇಂದ್ರ, ಪ್ರೋಪೆಸರ್, ಸಸ್ಟೇನಬಲ್ ಸ್ಟಡಿ ಸೆಂಟರ್, ಅಜೀಮ್ ಪ್ರೇಮಜಿ ಯುನಿವರ್ಸಿಟಿ, ಪಿಇಎಸ್ ಕ್ಯಾಂಪಸ್, ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು. | ಅಧಿಕಾರೇತರ ಸದಸ್ಯರು |

ಸನ್ಮಾನ್ಯ ಅಧ್ಯಕ್ಷರು, ಕರ್ನಾಟಕ ಜೀವವೈವಿಧ್ಯ ಮಂಡಳಿ, ಇವರು 46ನೇ ಸಭೆಗೆ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿದರು. ಆನಂತರ 45ನೇ ಸಭೆಯ ನಿರ್ಣಯಗಳಂತೆ ಶಿರಸಿ ತಾಲ್ಲೂಕಿನ ಸೊಂದಾ ಕೆರೆಯನ್ನು ಸಮುದಾಯ ಸಂರಕ್ಷಿತ ಪ್ರದೇಶವೆಂದು ಹಾಗೂ ಅರಣ್ಯ ಇಲಾಖೆಯ ಮುಖಾಂತರವಾಗಿ ಮುಂಡಿಗೆ ಜಡ್ಡಿ ಪಕ್ಷಿ ಗೂಡುಕಟ್ಟುವಿಕೆಯ ಪ್ರದೇಶವನ್ನು ಪಕ್ಷಿಧಾಮವೆಂದು ಘೋಷಿಸುವ ಕುರಿತು ರಾಜ್ಯ ವನ್ಯ ಜೀವಿ ಮಂಡಳಿಯ ಸಭೆಯಲ್ಲಿ ನಿರ್ಣಯವನ್ನು ಕೈಗೊಂಡಿರುವ ಅಂಶವನ್ನು ಮಂಡಳಿಯ ಗಮನಕ್ಕೆ ತರುತ್ತಾ ಪ್ರಧಾನ ಅರಣ್ಯ ಮುಖ್ಯ ಸಂರಕ್ಷಣಾಧಿಕಾರಿಗಳು ಹಾಗೂ ಅರಣ್ಯಕಾರ್ಯಪಡೆ ಮುಖ್ಯಸ್ಥರಿಗೆ ಅವರ ಪ್ರಯತ್ನಕ್ಕೆ ಅಭಿನಂದನೆಯನ್ನು ಸಲ್ಲಿಸಿದರು.

ಮುಂದುವರೆದಂತೆ, ಮಂಡಳಿಯು ಕರ್ನಾಟಕ ರಾಜ್ಯದ ವಿವಿಧ ಪ್ರದೇಶಗಳಲ್ಲಿ 15 ಹೊಸ ಮತ್ಸ್ಯಧಾಮಗಳನ್ನು ಗುರುತಿಸಿ ಅಧಿಸೂಚನೆ ಹೊರಡಿಸಲು ಮೀನುಗಾರಿಕೆ ಇಲಾಖೆಗೆ ಶಿಫಾರಸ್ಸು ಮಾಡಿರುವುದಾಗಿ ತಿಳಿಸುತ್ತಾ, ಘೋಷಣೆಯ ಹಂತದಲ್ಲಿದೆ ಎಂದು ಸಭೆಗೆ ತಿಳಿಸಿದರು.

ದಿನಾಂಕ 29/01/2021ರಂದು ಮಂಡಳಿಯು ಆಯೋಜಿಸುತ್ತಿರುವ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಬಲವರ್ಧನೆ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ಸಂದರ್ಭದಲ್ಲಿ ಮೇ 22ರಂದು ಆಚರಿಸಲಾಗುವ ಅಂತರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆ-2021ರ ಸಲುವಾಗಿ ರಾಜ್ಯಾದ್ಯಂತ ಹಮ್ಮಿಕೊಳ್ಳುವ ಕಾರ್ಯಕ್ರಮಗಳ ಕುರಿತು ಚರ್ಚಿಸಲಾಗುವುದೆಂದು ತಿಳಿಸಿದರು. ಈ ವಿಷಯದ ಬಗ್ಗೆ ಮಂಡಳಿಯ ಮಾನ್ಯ ಸದಸ್ಯರುಗಳ ಅಭಿಪ್ರಾಯಗಳನ್ನೂ ಸಹ ಸ್ವಾಗತಿಸುತ್ತಾ ಸದಸ್ಯ ಕಾರ್ಯದರ್ಶಿಗಳಿಗೆ ಕಾರ್ಯಸೂಚಿಗಳ ಬಗ್ಗೆ ಚರ್ಚಿಸಲು ತಿಳಿಸಿದರು.

| ಸಭೆಯ ಕಾರ್ಯಸೂಚಿ | ಸಭೆಯ ನಿರ್ಣಯಗಳು |
|---|---|
| **46/1-Reading and recording of Proceedings of the 45th Board Meeting:**<br>The proceedings of the 45th Board meeting held on 22/10/2020 were communicated to the members on 27/10/2020.<br><br>Corrections on the proceedings received from Principal Secretary (Ecology and Environment) Dept. of FEE were incorporated and final proceedings were sent to all the members on 28/10/2020. | 45ನೇ ಮಂಡಳಿ ಸಭೆಯ ಅಂತಿಮ ನಡವಳಿಯನ್ನು ದಿನಾಂಕ 28/10/2020ರಂದು ಎಲ್ಲಾ ಸದಸ್ಯರಿಗೆ ಕಳುಹಿಸಲಾಯಿತು. ಕಾರ್ಯಸೂಚಿಯ ಅನುಬಂಧ-1ರಲ್ಲಿ ವರದಿಯಾದ ನಡವಳಿಯನ್ನು ಅಂಗೀಕರಿಸಲಾಯಿತು. |

| | |
|---|---|
| As there were no comments from the members, the proceedings may be adopted. **(Annexure-I)** | |
| **46/2- Action taken on 45th Board meeting proceedings:**<br><br>Action taken on proceedings of 45th Board meeting are placed in **(Annexure-II)** | 45ನೇ ಮಂಡಳಿ ಸಭೆಯ ನಡವಳಿಗಳನ್ವಯ ಕೈಗೊಂಡ ಕ್ರಮಗಳನ್ನು ಅನುಬಂಧ–2ರಲ್ಲಿ ವರದಿಯಾದ ಕಾರ್ಯಸೂಚಿಯನ್ನು ಮಂಡಳಿಯು ಗಮನಿಸಿ ಈ ಕೆಳಕಂಡಂತೆ ಚರ್ಚಿಸಿತು. |
| **45/3 – Status of formation of Biodiversity Management Committees (BMC) and Preparation of People's Bio-diversity Registers :**<br>The comparative statement of periodic progress, for each quarter of the financial year with regard to the formation of the BMCs, PBRs, the achievements and the comparative statement of the budget sanctioned expenditure incurred in each quarter from FY 2019-2020 to till date is as below: (Tables are annexed in the Agenda copy) | ರಾಷ್ಟ್ರೀಯ ಹಸಿರು ನ್ಯಾಯಧಿಕರಣದ ಆದೇಶದಂತೆ ಮಂಡಳಿಯು ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆ ಹಾಗೂ ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆಯಲ್ಲಿ ಶೇ100%ರ ಗುರಿಯನ್ನು ಸಾಧಿಸಿರುವ ವಿಷಯನ್ನು ಮಂಡಳಿಯು ಗಮನಿಸಿತು.<br><br>ಈ ಕುರಿತು ಪ್ರಧಾನ ಕಾರ್ಯದರ್ಶಿಗಳು, (ಜೀವಿಪರಿಸ್ಥಿತಿ ಮತ್ತು ಪರಿಸರ) ರಾಜ್ಯದಲ್ಲಿ ಬಿಎಂಸಿಗಳ ರಚನೆ ಹಾಗೂ ಜ.ಜೀ.ದಾಗಳ ತಯಾರಿಕೆಯಲ್ಲಿ ಎಲ್ಲಾ ರೀತಿಯ ಸಹಕಾರವನ್ನು ನೀಡುವುದರೊಂದಿಗೆ ಗುರಿಯನ್ನು ಸಾಧಿಸಲು ಪಟ್ಟಿರುವ ನಿರಂತರ ಪ್ರಯತ್ನಕ್ಕೆ ಮಂಡಳಿಯನ್ನು ಶ್ಲಾಘಿಸಿದರು. |
| **45/5 - Directions of the State Government under sec 49(1) of the BD Act, 2002:**<br>The State Government vide its Directions dated 15/09/2020, has issued a window of opportunity of 60 days from the date of the order, for the entities to comply with the provisions of the BD Act and Rules, 2005. The Directions and the Standard Operating Procedure to implement the said Directions as advised by the empanelled advocates of the Board is put up for the deliberation and approval of the Board. **(Annexure-III)** | ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಅರಣ್ಯಪಡೆ ಮುಖ್ಯಸ್ಥರು ಶೀಘ್ರದಲ್ಲಿ ಪ್ರೋಬೆಷನರಿ ಭಾರತೀಯ ಅರಣ್ಯ ಸೇವಾ ಅಧಿಕಾರಿಗಳನ್ನು ಮಂಡಳಿಗೆ ನಿಯೋಜಿಸಲಾಗುವುದೆಂದು ಭರವಸೆ ನೀಡಿದರು. ಮಂಡಳಿಯಲ್ಲಿ ತರಬೇತಿಗಾಗಿ ಪ್ರೋಬೇಷನರಿ ಅಧಿಕಾರಿಗಳನ್ನು ಲಗತ್ತಿಸಿರುವ ಆದೇಶವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ನೀಡಲಾಗಿದೆ ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಧೃಢಪಡಿಸಿದರು. |

| | |
|---|---|
| **45/8 – Identification and conservation of Special Ecosystems:**<br>The Board has taken up several initiatives to carry forward this objective under the guidance of Hon'ble Chairman, Sri Ananth Hegde Ashisara. Some of such key activities done in last six months are placed here for the kind information of the Board. (Activities are annexed in the Agenda copy)<br><br>The above matter is placed before the Board for kind information and to seek further directions so that such activities are taken up with more effectiveness in coming days which may further help in realizing the objectives of Biological Diversity Act, 2002. | ಸನ್ಮಾನ್ಯ ಅಧ್ಯಕ್ಷರು, ಈ ವಿಷಯ ಕುರಿತು ಪರಿಣಿತ ತಜ್ಞರ ಸಮಿತಿಯನ್ನು ರಚಿಸಿ ಈ ವಿಷಯದ ಬಗ್ಗೆ ಚರ್ಚಿಸಿ ಮುಂದಿನ ಕ್ರಮಕ್ಕೈಗೊಳ್ಳಬೇಕಾಗಿದೆ ಎಂದು ಸಭೆಗೆ ತಿಳಿಸಿದರು. |
| **45/10 – Additional Agenda – Conservation of Heritage Trees:**<br>**On "Heritage Tress":** The Board has received representations from many experts and regions of the state to declare some old tress of ecological/ cultural / historical significance as "Heritage Trees of the State". Conservation experts are of the view that, it could be another effective tool for protecting biodiversity at gross root level. In fact, KBB itself had recommended declaring some trees as Heritage Trees in 2012. However, final notification could not be done as there were no clear policy guidelines in place as of now also in our state.<br><br>However, experts have now brought to the notice of the KBB the fact that, Uttara Pradesh State and Chandigarh UT have already declared some trees as State Heritage Trees under Biodiversity Act. The state Dept of Forest & Environment there has enabled the BMCs in this regard by notifying clear guidelines. (The relevant documents are | ಮಂಡಳಿಯು ಪಾರಂಪರಿಕ ವೃಕ್ಷಗಳ ಮಾರ್ಗಸೂಚಿಗಳನ್ನು ಪರಿಶೀಲಿಸಿ, ಜೀವವೈವಿಧ್ಯ ನಿರ್ವಹಣಾ ಸಮಿತಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವಂತಹ ವಿಶೇಷ ಹಾಗೂ ಪಾರಂಪರಿಕ ವೃಕ್ಷಗಳನ್ನು ಗುರುತಿಸಿ ಅವುಗಳನ್ನು ತಮ್ಮ ಹಂತದಲ್ಲಿಯೇ ಘೋಷಣೆ ಮಾಡಿ ಸಂರಕ್ಷಣೆ ಮಾಡಬಹುದು ಎಂಬ ಅಂಶವನ್ನು ಮಾರ್ಗಸೂಚಿಯಲ್ಲಿ ಸೇರಿಸಲು ಸಲಹೆಯನ್ನು ನೀಡಿತು. ಮಂಡಳಿಯ ದೀರ್ಘವಾದ ಚರ್ಚೆಯ ನಂತರ **Guidelines for selection of Heritage Trees in Karnataka** ವನ್ನು ಜೀವವೈವಿಧ್ಯ ಪಾರಂಪರಿಕ ತಾಣದ ನಿಯಮಗಳೊಂದಿಗೆ ಸೇರ್ಪಡೆ ಮಾಡಲು ಸಲಹೆಯನ್ನು ನೀಡಿತು. |

| | |
|---|---|
| attached in the enclosure).<br><br>Hence, KBB can initiate the process of identifying, declaring & managing the Heritage Trees in the state through BMC mechanism only under BD Act. The BMCs may identify unique old trees of ecological/cultural/historical significance in their jurisdiction and initiate protection measures, by getting consent and support of all concerned authorities, *mainly* of Deputy Conservator of Forest (DCF) and land owner (in case of revenue land).<br><br>The subject is placed for seeking the directions from the Board to come up with clear guidelines in this regard. | |
| **45/13 (A) and (B) – Regularize the Supporting Staff Posts sanctioned by the Government and the Posts of Research Associates, Consultants and Technical Executives** | ಈ ವಿಷಯದ ಬಗ್ಗೆ ಮಂಡಳಿಯಿಂದ ವೃಂದ ಮತ್ತು ನೇಮಕಾತಿ ನಿಯಮಗಳನ್ನು (**C&R Rules**) ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿರುವ ವಿಷಯವನ್ನು ಗಮನಿಸಿ ಮಾನ್ಯ ಅಧ್ಯಕ್ಷರು ತ್ವರಿತಗತಿಯಲ್ಲಿ ಸರ್ಕಾರದ ಹಂತದಲ್ಲಿ ಮುಂದಿನ ಕ್ರಮ ಕೈಗೊಳ್ಳಲು ಸಭೆಗೆ ತಿಳಿಸಿದರು. |
| **46/3-Status of Formation of Biodiversity Management Committees (BMC) and Preparation of People's Biodiversity Registers (PBR):**<br><br>The comparative statement of periodic progress, for each quarter of the financial year with regard to the formation of BMCs and preparation of PBRs achievements and the comparative statement of the budget sanctioned expenditure incurred in each quarter from FY 2020-2021 to till date is as below: (Tables are annexed in the Agenda copy)<br><br>100% BMC & PBR progress has been achieved. | ಪ್ರಧಾನ ಕಾರ್ಯದರ್ಶಿಗಳು (ಜೀವಿಪರಿಸ್ಥಿತಿ ಮತ್ತು ಪರಿಸರ) ಮಂಡಳಿಗೆ ಸಲ್ಲಿಸಲಾದ ಜನತಾ ಜೀವವೈವಿಧ್ಯ ದಾಖಲಾತಿಗಳಿಗೆ ಹಣವನ್ನು ಬಿಡುಗಡೆಗೊಳಿಸಲು ತಿಳಿಸಿದರು. ಇದಕ್ಕೆ ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆಯಲ್ಲಿ ಗುಣಮಟ್ಟವನ್ನು ಹೆಚ್ಚಿಸಬೇಕಾಗಿರುವ ಅವಶ್ಯಕತೆ ಯಿರುವುದು ಕಂಡು ಬಂದಿದ್ದು, ಗುಣಮಟ್ಟವುಳ್ಳ ದಾಖಲಾತಿಗಳಿಗೆ ಮಾತ್ರ ಹಣದ ಪಾವತಿಯನ್ನು ಮಾಡಲಾಗುತ್ತಿದೆ ಎಂದು ಅಧ್ಯಕ್ಷರು ಮತ್ತು ಸದಸ್ಯ ಕಾರ್ಯದರ್ಶಿಗಳು ತಿಳಿಸಿದರು.<br><br>ಜನತಾ ಜೀವವೈವಿಧ್ಯತೆಯ ದಾಖಲೆಗಳ ಬಳಕೆಯ ಕುರಿತು ದಿನಾಂಕ 29/01/2021ರಂದು ಆಯೋಜಿಸುವ ಕಾರ್ಯಗಾರದಲ್ಲಿ ಚರ್ಚಿಸಲಾಗುವುದೆಂದು ತಿಳಿಸಿದರು. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಹಲವಾರು ಸೂಕ್ಷ್ಮ ಪರಿಸರವುಳ್ಳ |

| | |
|---|---|
| | ಪ್ರದೇಶಗಳು/ಅಪರೂಪದ ಪ್ರಭೇದಗಳು ಕಂಡು ಬಂದಿದ್ದು, ಸಂಬಂಧಪಟ್ಟ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಸಹಭಾಗಿತ್ವದೊಂದಿಗೆ ಇವುಗಳನ್ನು ಸಂರಕ್ಷಿಸ ಬೇಕಾಗಿರುತ್ತದೆ. ಉದಾ : ಈಷಾಡ್ ಮಾವಿನತಳ, ರಾಜಮುಡಿ ಅಕ್ಕಿ ತಳ ಇತರೆ., ಜನತಾ ಜೀವವೈವಿಧ್ಯ ದಾಖಲಾತಿಯ ಆಧಾರದಂತೆ ಹಾಗೂ ಅವುಗಳನ್ನು ತಯಾರಿಸಿದ ಸಂಯೋಜಕರು ಮತ್ತು ಸಮುದಾಯದವರ ಸಹಕಾರದೊಂದಿಗೆ ಇಂತಹ ವಿಶೇಷ ತಳಗಳನ್ನು ಸಂರಕ್ಷಿಸುವ ಕಾರ್ಯ ನಡೆಯಲಿದೆ ಎಂದು ಮಾನ್ಯ ಅಧ್ಯಕ್ಷರು ಸಭೆಗೆ ತಿಳಿಸಿದರು. |
| **46/4 – (A) Trainings/Workshops/ Video Conference/Meetings conducted and Field Visits by the Board from October 2020 to January 2021**<br><br>**(B) Trainings/Workshops/ Video Conference/Meetings and Field Visits by the Hon'ble Chairman, KBB from October 2020 to January 2021** (The Tables are annexed in Agenda) | ಈ ವಿಷಯವನ್ನು ಮಂಡಳಿಯು ಗಮನಿಸಿತು ಹಾಗೂ ಸ್ಥಳೀಯ ಮಟ್ಟದಲ್ಲಿ ಜೈವಿಕವೈವಿಧ್ಯ ಅಧಿನಿಯಮ 2002ರ ಕುರಿತು ಜಾಗೃತಿ ಮೂಡಿಸುವಲ್ಲಿ ಮಂಡಳಿ ಹಾಗೂ ಮಾನ್ಯ ಅಧ್ಯಕ್ಷರು ಕೈಗೊಂಡ ಪ್ರಯತ್ನಗಳನ್ನು ಸಭೆಯು ಶ್ಲಾಘಿಸಿತು. |
| **46/5: Proceedings of the ABS Expert Committee meetings held on 19th November 2020 and 13th January 2021:**<br>The Proceedings of the 3rd and 4th ABS Expert Committee meetings held on 19th November 2020 and 13th January 2021 and the recommendations of the Committee are put up to the Board for approval. **(Annexure-III)** | ಈ ವಿಷಯವನ್ನು ಮಂಡಳಿಯು ಅನುಮೋದಿಸಿತು. |
| **46/6: Approval of the Board for the expenditure of ABS funds to establish Model BMCs in the State:**<br>1. A total amount of Rs. 4.27 crores under the ABS funds and Rs. 10.00 Lakh from Form-I fee has been collected in the Board. The ABS funds have to be | ಎ.ಬಿ.ಎಸ್.ನ ತಜ್ಞರ ಸಮಿತಿ ಸಲ್ಲಿಸಿದ ಶಿಫಾರಸ್ಸುಗಳ ಬಗ್ಗೆ ವಿವರವಾಗಿ ಚರ್ಚಿಸಿ ರಾಜ್ಯದಲ್ಲಿ ಮಾದರಿ ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನಾಗಿ ಪರಿವರ್ತಿಸಿ ಬಲವರ್ಧನೆ ಗೊಳಿಸಲು ಎ.ಬಿ.ಎಸ್ ಹಣವನ್ನು ತಾಲ್ಲೂಕು ಪಂಚಾಯತ್ ಬಿಎಂಸಿಗಳಿಗೆ ಮಂಜೂರು ಮಾಡಲು |

| | |
|---|---|
| disbursed to the concerned BMCs or in areas of conservation importance in the State. An administrative charge of not more than 5% can be retained by the Board from the total ABS funds accrued.<br>The proposal and the BMCs to which the ABS funds may be disbursed (as per the resolution of the 44th Board meeting, model BMCs may be constituted in each of the 4 revenue divisions of the State) was discussed during the 4th meeting of the ABS Expert Committee held on 13th January 2021.<br><br>The ABS Expert Committee upon due deliberation has recommended the utilization of the ABS funds for the activities detailed under the notification of the Government (Government order dtd 19/11/2020) to the Taluk BMCs of Shivamogga District from the Bangalore Revenue Division, Uttara Kannada District from the Belgaum Revenue Division, after detailed discussion on the action plans submitted by the BMCs. **(Annexure-IV** proceedings of the ABS Committee)<br><br>It is also put up to the Board that, Bantwal (Dakshina Kannada Dist), Periyapatna (Mysore Dist) and Chincholi Taluk (Kalaburgi Dist) were identified as biodiversity rich talukas of the State and approved in the 35th Board meeting held on 22/08/2017 for the disbursement of the ABS funds. Detailed action plans as per the Government notification will be obtained from these Taluk BMCs for the conservation activities with the ABS funds.<br>The proceedings of the meeting and their recommendations are put up to | ಮತ್ತು ವಿತರಿಸಲು ಮಂಡಳಿ ಅನುಮೋದನೆ ನೀಡಿತು.<br><br>ಮಂಡಳಿಯಲ್ಲಿ ಉನ್ನತ ಆರ್ಥಿಕ ಮೌಲ್ಯದ ಜೈವಿಕ ಸಂಪನ್ಮೂಲಗಳಾದ ಚಂದನ ಮತ್ತು ರಕ್ತಚಂದನದ ಹರಾಜಿನಿಂದ ಸಂಗ್ರಹಿಸಲಾದ ಎ.ಬಿ.ಎಸ್‌ನ ಹಣವನ್ನು ಕೇಂದ್ರೀಕೃತ ವ್ಯವಸ್ಥೆಯ ಮೂಲಕ ಮಂಡಳಿಯ ಪ್ರಧಾನ ಕಛೇರಿಯಿಂದ ಕರ್ನಾಟಕ ಅರಣ್ಯ ಇಲಾಖೆ ಹಾಗೂ ಆಯ್ಕೆಗೊಳಿಸಿದ ಪ್ರದೇಶಗಳ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಸಹಯೋಗದೊಂದಿಗೆ ಸಂರಕ್ಷಣಾ ಚಟುವಟಿಕೆಗಳಿಗೆ ಬಳಸಿಕೊಳ್ಳಬಹುದೆಂದು ಸಭೆಯು ತೀರ್ಮಾನಿಸಿತು.<br><br>ರಾಜ್ಯದ ಅರಣ್ಯಗಳಲ್ಲಿ ಸ್ವಾಭಾವಿಕವಾಗಿ ಕಂಡುಬರುವಂತಹ ರೋಸ್‌ವುಡ್ ಮರಗಳನ್ನು ಉನ್ನತ ಆರ್ಥಿಕ ಮೌಲ್ಯದ ಜೈವಿಕ ಸಂಪನ್ಮೂಲದ ಪಟ್ಟಿಗೆ ಸೇರಿಸಬೇಕಾಗಿ ಮಂಡಳಿಯು ತೀರ್ಮಾನಿಸಿತು.<br><br>ರಾಜ್ಯದಲ್ಲಿ ರೋಸ್‌ವುಡ್ ಮರಗಳ ಹರಾಜಿನಲ್ಲಿ ಎಬಿಎಸ್‌ನ 5% ಮುಂಗಡ ಪಾವತಿಯನ್ನು ಸಂಗ್ರಹಿಸಲು ರಾಜ್ಯ ಸರ್ಕಾರಕ್ಕೆ ಪ್ರಾತಿನಿಧ್ಯವನ್ನು ನೀಡಲು ಮತ್ತು ಅರಣ್ಯ ಸಂಹಿತೆಯಲ್ಲಿ **(Forest Code)** ಸೇರಿಸಲು ಮಂಡಳಿಯು ತೀರ್ಮಾನಿಸಿತು.<br><br>ಈ ವಿಷಯ ಕುರಿತು ದಿನಾಂಕ 29/01/2021ರಂದು ಹಮ್ಮಿಕೊಳ್ಳಲಾಗುತ್ತಿರುವ ಕಾರ್ಯಾಗಾರದಲ್ಲಿ ಮಾನ್ಯ ಶ್ರೀ ಕೆ.ಎಸ್ ಈಶ್ವರಪ್ಪ, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯ ಸಚಿವರ ಸಮ್ಮುಖದಲ್ಲಿ ಚರ್ಚಿಸಿ ಫಲಶೃತಿ ಕಾಣುವಂತೆ ನಿರ್ಣಯ ಕೈಗೊಳ್ಳಲಾಗುವುದೆಂದು ಹಾಗೂ ಇದು ಅವಶ್ಯಕ ಪ್ರಯತ್ನವೆಂದು ಮಾನ್ಯ ಅಧ್ಯಕ್ಷರು ಸಭೆಗೆ ತಿಳಿಸಿದರು.<br><br>ಮಾನ್ಯ ಅಧ್ಯಕ್ಷರು ಮಂಡಳಿಯ ಜಿಲ್ಲಾ ನೋಡಲ್ ಅಧಿಕಾರಿಗಳಾದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಸಾಮಾಜಿಕ ಅರಣ್ಯ) ಮತ್ತು ವಲಯ ಅರಣ್ಯ ಸಂರಕ್ಷಣಾಧಿಕಾರಿಗಳ ನೇತೃತ್ವದಲ್ಲಿ ಮತ್ತು ನಿರ್ದೇಶನದ ಮೇರೆಗೆ |

| | |
|---|---|
| the Board for approval to establish model BMCs in the State.<br><br>2. Similarly, after many field visits across the state and consultation with stakeholders, it is deeply felt that there is a need for taking up immediate conservation efforts in many biodiversity rich ecosystems, for example, mangrove and estuaries in coastal districts, *Myristica* swamps & Sacred Groves Western Ghats districts and Kava, grasslands, ponds with bird nesting areas, *Gundu-topus* etc in Central-plain districts. Several threatened species also need conservation interventions, which may otherwise disappear. For example, endemic *Cycas* species in Mandya district, Citrus species in Western Ghats area and so on.<br>The approval of the Board is also sought for the identification of Ten Grama Panchayat BMCs, one District level BMC and one Corporation BMC, considering parameters like ensuring state wide representation, strength of the BMC, the ecological significance of the given area etc, for developing Model BMCs and to undertake conservation activities in line with the State Government notification dtd 19/11/2020.<br>Each selected GP BMC may be given Rs. 5.00 Lakh and the District and Corporation BMCs may be given Rs. 10.00 Lakh based on the action plans submitted by the BMCs, which may be reviewed by the ABS Expert Committee for recommendations and suggestions.<br>ABS amount of Rs. 1.52 crore is available with the Board, accrued from | **ಹಣವನ್ನು ಬಿಡುಗಡೆ ಮಾಡಬಹುದು ಮತ್ತು ಈ ಕುರಿತು ಕಾಲಕಾಲಕ್ಕೆ ಮೇಲ್ವಿಚಾರಣೆ ನಡೆಸಬೇಕೆಂದೂ ಸಹ ತಿಳಿಸಿದರು.**<br><br>**ಸಂಗ್ರಹಿಸಲಾದ ಎ.ಬಿ.ಎಸ್ ಹಣವು ಯಾವ ಜೀವವೈವಿಧ್ಯ ನಿರ್ವಹಣಾ ಸಮಿತಿಗಳಿಂದ ಬಂದಿರುತ್ತದೆ ಎಂಬ ಮಾಹಿತಿ ಇಲ್ಲದಿರುವ ಕಾರಣ ಸಂಗ್ರಹಿಸಲಾದಂತಹ ಎ.ಬಿ.ಎಸ್ ಹಣವನ್ನು ಸಂರಕ್ಷಣಾ ಕಾರ್ಯಚಟುವಟಿಕೆಗಳಿಗೆ ಅಂದರೆ ರಾಮಪತ್ರೆ ಜಡ್ಡಿ, ಪರಿಸರ ಸೂಕ್ಷ್ಮ ಪ್ರದೇಶಗಳು, ಜೀವವೈವಿಧ್ಯ ಉದ್ಯಾನವನದ ಸ್ಥಾಪನೆ ಇತ್ಯಾದಿಗಳಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ (ಸಾಮಾಜಿಕ ಅರಣ್ಯ) ಮೂಲಕ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಸಹಕಾರವನ್ನು ಪಡೆದು ನೇರವಾಗಿ ಮಂಡಳಿಯ ಮುಖಾಂತರ ನೀಡಬಹುದೆಂದು ಮಾನ್ಯ ಅಧ್ಯಕ್ಷರು ಅಭಿಪ್ರಾಯಿಸಿದರು. ಇದಕ್ಕೆ ಸಭೆಯು ಅನುಮೋದನೆ ನೀಡಿತು.** |

| | |
|---|---|
| the auctions of the Red Sanders and Sandalwood from the Mysore, Bangalore, Dharwad Divisions of the Karnataka Forest Department.<br><br>A letter dtd 21/09/2018 from the office of the APCCF (FRM) also states that "since the Red Sanders was confiscated material which was seized in various Police cases & forest Offence cases across the State and difficult to conclusively trace the origin of the Red Sanders. In view of the Section 80 of the Karnataka Forest Act, 1963, it is legally presumed that all belong to Karnataka".<br><br>Further, the National Biodiversity Authority vide their letter no. NBA/Tech Gen/22/161/KA/20/3520 dated 28/12/2020 has sanctioned an amount of Rs. 58,49,526/- (the Board is to retain Rs.1,22,334/- as administrative charges from the sanctioned amount) as benefit sharing component to be released to concerned BMCs or benefit claimers in Karnataka.<br><br>Therefore, the matter is put up to the approval of the Board to utilize the ABS amount received from successful bidders of Sandalwood & Red Sanders for the conservation activities and overall biodiversity conservation with special emphasis on medicinal plants, Sandalwood and Red Sanders in the concerned districts where these bio-resources occur in the State. Such model schemes will help in generating success stories in achieving the objectives of ABS fund.<br><br>The details of the funds accrued from Sandalwood and Red Sanders are annexed in Agenda. | |

| | |
|---|---|
| **46/7: Increase in sitting fees of subject experts of the Expert Committees of the Board:**<br>The Chairperson of the Expert Committee on ABS during its meeting held on 13th January 2021, has expressed that the sitting fees paid to the subject experts of the Expert Committee is very low given the expertise and the valuable time that the members invest in providing the recommendations to the Board and has submitted that the same maybe suitably enhanced.<br>As per the Govt Order No: FEE 180 ENV 2017 dated 11/12/2017 the sitting fees of Rs. 3000/- for Members of the Expert Committees of the Board was approved. **(Annexure – IV-A)**<br><br>The matter is placed before the Board for information. | ಎಲ್ಲಾ ಪರಿಣಿತ ತಜ್ಞ ಸಮಿತಿಗಳ ಸದಸ್ಯರಿಗೆ ರೂ ೩೦೦೦/-ಗಳ ಉಪಸ್ಥಿತಿ ಭತ್ಯ ನೀಡಬೇಕೆಂದು ಸಭೆಯು ನಿರ್ಣಯಿಸಿತು. |
| **46/8: Constitution of Expert Committee to update the list of threatened species notified under Section 38, of BD Act 2002.**<br>In continuation of 45th Board meeting and as per the discussion held in the 43rd Board Meeting, Expert Committee has been constituted vide No:TEC/ C05/THR/01dated 10/06/2020 for updating of plant and animal species notified under Section 38 of Biological Diversity Act 2002. Chairman of EC on animal species has submitted final report on 12/01/2021.<br><br>Similarly, Chairman of EC on plant species has submitted the final report on 11/01/2021. **(Annexure-V)**<br><br>The subject is placed before the Board for approval. | ಪರಿಣಿತ ಸಮಿತಿಗಳು ಸಲ್ಲಿಸಿರುವ ವರದಿಗೆ ಸಭೆಯು ಅನುಮೋದನೆ ನೀಡಿತು.<br><br>ಮುಂದುವರೆದಂತೆ, ಅಳಿವಿನಂಚಿನ ಪ್ರಭೇಧಗಳ ಪಟ್ಟಿಯನ್ನು ಕ್ರೋಢಿಕರಿಸುವ ಸಂದರ್ಭದಲ್ಲಿ ಸ್ಥಳೀಯ ವಿಷಯ ತಜ್ಞರ ಅಭಿಪ್ರಾಯ ಹಾಗೂ ಸಲಹೆಗಳನ್ನು ಪಡೆದು ಇವುಗಳ ಮಾಹಿತಿಯನ್ನು ಸಂಗ್ರಹಿಸುವುದು ಮುಖ್ಯವಾಗಿರುತ್ತದೆ ಎಂದು ಸಭೆಯು ತೀರ್ಮಾನಿಸಿತು.<br><br>ಈ ಪಟ್ಟಿಯನ್ನು ನವೀಕರಿಸುವ ಸಂದರ್ಭದಲ್ಲಿ ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ ಪ್ರಾಧ್ಯಾಪಕರುಗಳನ್ನು, ಪರಿಣಿತರನ್ನು ಮತ್ತು ಕ್ಷೇತ್ರ ಜೀವಿಶಾಸ್ತ್ರ ತಜ್ಞರ ಸೇವೆಗಳನ್ನು ಪಡೆದು **CAMP Workshop (Conservation Assessement and Management Plan)** ಕಾರ್ಯಗಾರವನ್ನು ನಡೆಸಬಹುದೆಂದು ಡಾ. ಕುಶಾಲಪ್ಪ, ಮುಖ್ಯಸ್ಥರು, ಅರಣ್ಯ ಕಾಲೇಜ್, ಪೊನ್ನಂಪೇಟೆರವರು ಸಭೆಗೆ ಸಲಹೆಯನ್ನು ನೀಡಿದರು. ಇದರಿಂದ ಉತ್ತಮವಾದ ಪಟ್ಟಿಯನ್ನು |

| | |
|---|---|
| | ತಯಾರಿಸಬಹುದಾಗಿರುತ್ತದೆ ಎಂದು ಅಭಿಪ್ರಾಯಿಸಿದರು. ಇದನ್ನು ಸಭೆಯು ಅಂಗೀಕರಿಸಿತು. |
| **46/9: Preparation of People's Biodiversity Registers and strengthening the Biodiversity Management Committees. (BMCs)**<br><br>Karnataka Biodiversity Board has achieved 100% progress in constitution of Biodiversity Management Committees and preparation of People's Biodiversity Registers as per the Section 41 of Biological Diversity Act 2002 and Rule 21 of Karnataka Biological Diversity Rules 2005.<br><br>Presence of Biodiversity Management Committees at local body level makes it easier for the implementation of Biological Diversity Act 2002 in its true sense & spirit. But, Biodiversity Management Committees lack awareness with reference to its roles and responsibilities. BMC draws its power from the BD Act, 2002, wherein, as per the Section 41(3), the BMCs may levy charges by way of collecting fees for collecting bio-resources for commercial purposes which is in addition to the benefit sharing payable to the National Biodiversity Authority / State Biodiversity Board. BMCs can even advice SBB in policy formulation with respect to the local biodiversity (as per the Rule 21(8) of KBD Rules, 2005). Along with that, BMCs should be consulted on certain issues by SBB or the State government.<br><br>Though BMCs has wide range of powers & responsibilities, it is remaining dormant due to lack of awareness. Hence, it is the duty of the Board, | ಈ ವಿಷಯದ ಬಗ್ಗೆ ಮಂಡಳಿಯು ದೀರ್ಘವಾಗಿ ಚರ್ಚಿಸಿತು. ಇದು ನಿರಂತರ ಕಾರ್ಯಕ್ರಮವಾಗಿದ್ದು ಮೊದಲನೆಯದಾಗಿ ಮಾದರಿ ಜೀವವೈವಿಧ್ಯ ನಿರ್ವಹಣಾ ಸಮಿತಿಯನ್ನು ರಚಿಸಿ ಅಂತರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆಯ ಸಂದರ್ಭದಲ್ಲಿ ಪ್ರೋತ್ಸಾಹಿಸುವುದು. ಗ್ರಾಮ ಪಂಚಾಯಿತಿಗಳಲ್ಲಿ ಚುನಾವಣೆಯಾದ ಪ್ರಯುಕ್ತ ಹೊಸದಾಗಿ 60,000 ಹೊಸ ಸ್ಥಳೀಯ ಸಮಿತಿಯ ಸದಸ್ಯರುಗಳು ಆಯ್ಕೆಗೊಂಡಿದ್ದು ಇವರುಗಳಿಗೂ ಸಹ ತರಬೇತಿ ನೀಡಬೇಕಾಗಿರುತ್ತದೆ ಎಂದು ಚರ್ಚಿಸಲಾಯಿತು. ಟೋಲ್‌ಫ್ರೀ ನಂಬರ್ ರಚಿಸುವುದು ಹಾಗೂ ಆಕಾಶವಾಣಿ ಬಳಕೆ ಮಾಡುವುದರಿಂದ ಜೀವವೈವಿಧ್ಯ ನಿರ್ವಹಣಾ ಸಮಿತಿಗಳಿಗೆ ಪರಿಣಾಮಕಾರಿಯಾಗಿ ಜಾಗೃತಿ ಮೂಡಿಸ ಬಹುದಾಗಿರುತ್ತದೆ ಎಂದು ಸದಸ್ಯರು ಅಭಿಪ್ರಾಯಿಸಿದರು.<br><br>ಈ ಜಾಗೃತಿ ಕಾರ್ಯಕ್ರಮಗಳ ವೆಚ್ಚಕ್ಕೆ ರೂ.20.00ಲಕ್ಷಗಳ ಅನುಮೋದನೆಯನ್ನು ಮಂಡಳಿಯು ನೀಡಿತು. |

| | |
|---|---|
| specifically Technical Executives of PBR Section, to provide training to BMCs & create awareness in order to strengthen them. (Proposed BMCs awareness programmes list are annexed in Agenda)<br><br>The Estimated Budget required for the above detailed programmes is Rs. 20.00 lakhs.<br><br>The subject is placed before the Board for approval. | |
| **46/10: Conservation of primeval swamps in Kathalekan comprising the relics of Myristica trees and other associated species, by declaring the areas as Biodiversity Heritage Sites:**<br>A field visit was made to Myristica Swamps in Kathalekan, Siddapura, Uttara Kannada district on 08.01.2021 followed by which, an onsite meeting was held under the Chairmanship of Sri Anantha Hegde Ashisara, Chairperson, Karnataka Biodiversity Board. The Forest officials, Board Members and Experts in the field of Ecology also attended the meeting. About 188 swamps are reported to be present scattered in this region which are of quiet significance. The Myristica Swamp present in the vicinity (on either sides) of the Bengaluru-Honnavar highway is facing huge anthropogenic stress and threats in the form of shifting cultivation and encroachments. The seed succession and regeneration of the Myristica sps. is very low as opined by the experts and care needs to be taken protect these remnant species and associated fauna (Ex: *Idea malabarica* – Endemic butterfly sps) help in pollination of Myristica flowers | ಈ ವಿಷಯ ಕುರಿತು ದೀರ್ಘವಾದ ಚರ್ಚೆಯ ನಂತರ, ಕತ್ತಲೇಖಾನ್ ಪ್ರದೇಶದೊಂದಿಗೆ ಪ್ರಾಚೀನ ಮಿರಿಸ್ಟಿಕಾ ಜೌಗು (ರಾಮಪತ್ರೆ ಜಡ್ಡಿ) ಪ್ರದೇಶಗಳನ್ನು ಜೀವವೈವಿಧ್ಯ ಪಾರಂಪರಿಕ ತಾಣವೆಂದು ಘೋಷಿಸುವ ಬಗ್ಗೆ ರಾಜ್ಯ ಸರ್ಕಾರದ ಅಧಿಸೂಚನೆಯನ್ನು ಹೊರಡಿಸಲು ಮಂಡಳಿಯು ನಿರ್ಧರಿಸಿತು.<br><br>ಇದಕ್ಕೆ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿಗಳು, ಸ್ಥಳೀಯ ಪಂಚಾಯತ್‌ನ ನಿರ್ಣಯಗಳು, ಜಮೀನಿನ ಮಾಲೀಕರ ಅಭಿಪ್ರಾಯಗಳು ಇತ್ಯಾದಿಗಳಿಂದ ಅಗತ್ಯವಾದ ಅನುಮೋದನೆ ಗಳನ್ನು ಪಡೆಯಲಾಗುವುದು ಎಂಬುದನ್ನು ಸಭೆಯು ಗಮನಿಸಿತು.<br><br>ಜೀವವೈವಿಧ್ಯ ಪಾರಂಪರಿಕ ತಾಣಗಳ ನಿರ್ವಹಣೆಗೆ, ಕರಡು ನಿಯಮಗಳು (ಕರ್ನಾಟಕ ಜೀವವೈವಿಧ್ಯ ಪಾರಂಪರಿಕ ತಾಣಗಳ ಗುರುತಿಸುವಿಕೆ, ಅಧಿಸೂಚನೆ, ಘೋಷಣೆ ಮತ್ತು ನಿರ್ವಹಣೆಯ ನಿಯಮಗಳು 2020) ತಯಾರಿಕೆಯ ಹಂತದಲ್ಲಿದೆ ಎಂಬ ವಿಷಯವನ್ನು ಮಾನ್ಯ ಅಧ್ಯಕ್ಷರು ಮಂಡಳಿಯ ಗಮನಕ್ಕೆ ತಂದರು. ನಿಯಮಗಳ ಅಧಿಸೂಚನೆಯಾಗುವವರೆಗೆ ಹೊಸ ಪಾರಂಪರಿಕ ತಾಣಗಳ ಗುರುತಿಸುವಿಕೆ ಮತ್ತು ಘೋಷಣೆಗೆ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರದ ಮಾರ್ಗಸೂಚಿಗಳು ಮತ್ತು ಜೈವಿಕವೈವಿಧ್ಯ ಅಧಿನಿಯಮ 2002ರ ಸೆಕ್ಷನ್ (37)(1)ಮತ್ತು |

| | |
|---|---|
| and the Lion Tailed Macaque (*Macaca silenus*) and Great Pied hornbill (*Buceros bicornis*) which play a major role in seed dispersal. The primate is also an endangered fauna and a flagship species with a dwindling population of about 3500-4000 species in wild. Studies have revealed that the Myristica swamps also harbour about 40 species of amphibians which are endemic to the region.<br><br>In the meeting held on 08/01/2021, it was opined that as a preliminary step towards conservation of these unique swamps, a particular patch of Myristica Swamp present along the Bengaluru-Honnavar highway must be declared as Biodiversity Heritage Site (BHS) under section 37(1) of Biological Diversity Act, 2002 since the area meets the criteria under definition of BHS for the presence of "*species of evolutionary significance and ancestors of domestic species, areas represented by fossil beds having a significant cultural diversity, with or without a long history of human association with them*". The brief details of the Myristica swamps are placed as **(Annexure-VI)**<br><br>The matter is placed before the Board for deliberation and suitable decision on declaring the area as BHS. | ಕರ್ನಾಟಕ ಜೈವಿಕವೈವಿಧ್ಯ ನಿಯಮಗಳು 2005ರ ನಿಯಮ (20) ಅನ್ವಯಿಸುತ್ತದೆ.<br><br>ಈ ವಿಷಯವನ್ನು ಮಂಡಳಿಯು ಗಮನಿಸಿ, ಪ್ರಸ್ತುತವಾಗಿ ಅನುಸರಿಸುತ್ತಿರುವ ಕ್ರಮದಂತೆ ಕತ್ತಲೆ ಕಾನು ಪ್ರದೇಶವನ್ನು ಜೀವವೈವಿಧ್ಯ ಪಾರಂಪರಿಕ ತಾಣವೆಂದು ಘೋಷಿಸಲು ಮಂಡಳಿಯು ಅನುಮೋದಿಸಿತು. |
| **46/11: Conservation of urban green area - Roerich and Devika Rani Roerich Estate (Tataguni Estate) by declaring the area as Biodiversity Heritage Site (BHS):**<br>The matter on declaration of Roerich and Devika Rani Roerich Estate as Biodiversity Heritage Site (BHS) was discussed in the 28th Board meeting. The Board had resolved to consider the area for declaration under Section-37 of | ಈ ಪ್ರದೇಶವು ಆನೆ ಅಭಯಾರಣ್ಯದ ಹಾದಿಯಲ್ಲಿ ಇರುತ್ತದೆ ಮತ್ತು ಸಮೀಪದಲ್ಲಿ ಸುಮಾರು 2,000 ಎಕರೆಯಷ್ಟು ಖಾಲಿ ಪ್ರದೇಶವು ಕೋಡೇಸ್‌ನವರ ಮಾಲೀಕತ್ವದಲ್ಲಿರುತ್ತದೆ ಎಂದು ಮಾನ್ಯ ಅಧ್ಯಕ್ಷರು ಸಭೆಗೆ ತಿಳಿಸಿದರು. ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರು ರೋರಿಚ್ ಎಸ್ಟೇಟ್ ಮಂಡಳಿಗೆ ಅಧ್ಯಕ್ಷರಾಗಿರುತ್ತಾರೆ ಈ ಪ್ರದೇಶವನ್ನು ಜೀವವೈವಿಧ್ಯ ಪಾರಂಪರಿಕ ತಾಣವನ್ನಾಗಿ ಘೋಷಿಸಲು ಮಾನ್ಯ ಅಧ್ಯಕ್ಷರು ಮುಖ್ಯ |

| | |
|---|---|
| Biological Diversity Act, 2002 since the estate is having great Biodiversity as well as heritage value. Subsequently, the jurisdictional BMC of Agara Grama Panchayath, Bengaluru South Taluk, Bengaluru Urban District and the BMC of Zilla Panchayath, Bengaluru Urban District also recommended for considering the area for BHS tag, but the matter was dropped since there was another proposal for development of the area as film city. Subsequently, the film city project also could not be achieved due to objections from public in the interest of preservation of estate and also considering that the area has already been declared as deemed forests, its mandatory to take Forest clearance from the central Government and the Honb'le Supreme Court under Forest (Conservation) Act 1980 for any non forestry activities.<br><br>The Hon'ble Chairman, Karnataka Biodiversity Board visited the site on 24/12/2020 and discussed the matter with the Chief Executive Officer, Roerich and Devika Rani Roerich Estate Board, who informed that biodiversity rich estate is facing various threats such as dumping of garbage and municipal solid wastes. The area is also under high risk of encroachments. During the visit, the Chief Executive Officer, Roerich Estate Board also expressed interest in conserving the areas as BHS. The extent and brief details of the site enclosed as **(Annexure-VII)**<br>The matter is placed before the Board for suitable decision on declaring the area as BHS. | **ಕಾರ್ಯದರ್ಶಿಗಳಿಗೆ ಈಗಾಗಲೇ ಪ್ರಸ್ತಾವನೆಯನ್ನು ಸಲ್ಲಿಸಿರುವ ವಿಚಾರವನ್ನು ಸಭೆಯ ಗಮನಕ್ಕೆ ತಂದರು.**<br><br>**ಈ ವಿಷಯವನ್ನು ಮಂಡಳಿಯು ಗಮನಿಸಿ, ಪ್ರಸ್ತುತವಾಗಿ ಅನುಸರಿಸುತ್ತಿರುವ ಕ್ರಮ ಹಾಗೂ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರದ ಮಾರ್ಗಸೂಚಿಗಳಂತೆ ತಾತಗುಣಿ ಎಸ್ಟೇಟ್‌ನ ಪ್ರದೇಶವನ್ನು ಜೀವವೈವಿಧ್ಯ ಪಾರಂಪರಿಕ ತಾಣವೆಂದು ಘೋಷಿಸಲು ಅನುಮೋದಿಸಲಾಯಿತು.** |

| | |
|---|---|
| **46/12: Conservation of Kondajji Lake at Davangere District**<br>Kondajji Lake located in Kondanjji village of Harihar taluk, Davangere District of Karnataka. On the request of the Deputy Commissioner and Local Officers of the district, Hon'ble Chairman, Karnataka Biodiversity Board, visited Kondajji Lake on 5th January 2021. The surroundings of the lake are rich in biodiversity and diversity of Odonates is also considerable. Conservation of biodiversity at the site is important and since local officers have requested for declaration as BHS, the same may be considered by the Board for recommendation to the State Government as a Biodiversity Heritage Site.<br><br>The subject is placed before the Board for information. | **ಪ್ರಸ್ತಾವನೆಯನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಅರಣ್ಯ ಕಾರ್ಯಪಡೆ ಮುಖ್ಯಸ್ಥರಿಗೆ ಸಲ್ಲಿಸಿ ೫೦೦ ಎಕರೆ ಪ್ರದೇಶವುಳ್ಳ ದಾವಣಗೆರೆ ಜಿಲ್ಲೆಯ, ಹರಿಹರ ತಾಲ್ಲೂಕಿನ ಕೊಂಡಜ್ಜಿ ಕೆರೆಯನ್ನು ಸಮುದಾಯ ಸಂರಕ್ಷಿತ ಪ್ರದೇಶವೆಂದು ರಾಜ್ಯ ವನ್ಯ ಜೀವಿ ಮಂಡಳಿಯ ಮೂಲಕ ಘೋಷಿಸಲು ಮಂಡಳಿಯು ತೀರ್ಮಾನಿಸಿತು.** |
| **46/13: The Draft Audited Accounts Report for the year 2019-20:**<br>The Draft Separate Audit report on the accounts of the Karnataka Biodiversity Board, Bengaluru for the year 2019-20 was submitted by Accountant General (Audit-II), Karnataka vide No: AG (Audit-II)/AMG/Co-ord/B/2020-21/44 dated: 06/11/2020. **(Annexure-VIII)**<br><br>The remarks to the Draft Separate Audit report sent to Accountant General Office on 13/11/2020.<br><br>And the Budget and Expenditure details of Karnataka Biodiversity Board for the financial year 2019-20 is also placed before the Board for information. **(Annexure –IX)** | **ಮಂಡಳಿಯು ಕರಡು ಲೆಕ್ಕಪರಿಶೋಧನಾ ವರದಿಯನ್ನು ಪರಿಶೀಲಿಸಿ ಅನುಮೋದನೆ ನೀಡಿತು.** |

| | |
|---|---|
| **46/14: Celebration of International Day for Biological Diversity.**<br><br>Karnataka Biodiversity Board is celebrating May 22nd of every year as International Day for Biological Diversity. On the occasion of IBD, Chairman, KBB is planning to conduct awareness programmes, Campaigns on Biodiversity and sapling plantation with the involvement of Biodiversity Management Committees and the local communities in all the districts of Karnataka. The total amount required for the programme is Rs. 30.00 lakhs. Programme details mentioned as in **(Annexure-X)**<br><br>The subject is placed before the Board for approval. | ಮಂಡಳಿಯ ಮಾನ್ಯ ಅಧ್ಯಕ್ಷರು ರಾಜ್ಯದಲ್ಲಿ ಸಂರಕ್ಷಣೆಯ ಬಗ್ಗೆ ಪರಿಣಾಮಕಾರಿಯಾಗಿ ಜಾಗೃತಿಯನ್ನು ಮೂಡಿಸಲು ಪ್ರತಿ ಜೀವವೈವಿಧ್ಯ ನಿರ್ವಹಣಾ ಸಮಿತಿಗಳಲ್ಲಿ ಜೀವವೈವಿಧ್ಯ ದಿನಾಚರಣೆಯ ಅಂಗವಾಗಿ ಹಮ್ಮಿಕೊಳ್ಳಲಾಗುವ ಕಾರ್ಯಚಟುವಟಿಕೆಗಳ ಕುರಿತು ಸದಸ್ಯರುಗಳಿಗೆ ವಿವರಿಸಿದರು.<br><br>ಮಂಡಳಿಯು ಈ ವಿಷಯವನ್ನು ಪರಿಶೀಲಿಸಿ ಅನುಮೋದನೆಯನ್ನು ನೀಡಿತು. |
| **Any other subject with the permission of the Chair.**<br><br>**46/15 Establishment of Biodiversity Park in Gendekatte, Hassan:**<br>The matter on establishment of Biodiversity Park in Gendekatte, Hassan District was discussed in the 44th Board meeting held on 26/06/2020. The proposal submitted by the DCF, (Territorial), Hassan for a budget of Rs.145.00 lakhs was placed before the Board for approval. The Board had resolved that the project may be implemented with permission of PCCF (HoFF), Karnataka Forest Department under the supervision of CCF, Hassan and DCF (T), Hassan with technical support from Karnataka Biodiversity Board. However, a response was received from Karnataka Forest Department stating that the project cannot be implemented during 2020-21 due to insufficiency of funds. | ಈಗಾಗಲೇ ಜೈವಿಕ ಉದ್ಯಾನವನದ ಯೋಜನೆಯ ಜಾರಿ ತುಂಬಾ ತಡವಾಗಿದ್ದು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಪ್ರಾದೇಶಿಕ) ಹಾಸನ ಮೂಲಕ ಯೋಜನೆ ಜಾರಿ ಮಾಡಲು ಮಾನ್ಯ ಅಧ್ಯಕ್ಷರು ಸೂಚಿಸಿದರು.<br><br>ಚರ್ಚೆಯ ನಂತರ ಈ ಯೋಜನೆಗೆ ಆರಂಭಿಕ ಅನುದಾನ ರೂ 50.00 ಲಕ್ಷಗಳನ್ನು ನೀಡಲು ಮಂಡಳಿಯು ನಿರ್ಣಯಿಸಿತು. |

| | |
|---|---|
| The Board noted the matter, in the 45th Board meeting it was resolved to request PCCF (HoFF) to implement the project during 2021-22. The same has also been communicated to PCCF (HoFF) vide letter dated 08/12/2020.<br><br>In this regard, a grant of Rs. 50.00 lakhs may be sanctioned to the DCF (T) from the Board's budget so as to initiate the implementation of the Biodiversity Park project in Gendekatte. The Karnataka Forest Department may also be requested to sanction the additional grants based on the progress in implementation.<br><br>The matter is placed before the Board for kind approval. | |
| **46/16 Rocky shores of Dhareshwara and degradation of forests in the Coastal region.** | ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ ಹೊನ್ನಾವರ ಅರಣ್ಯ ವಿಭಾಗದ ರಾಖಿ ಶೋರ್ಸ್ ಆಫ್ ಧಾರೇಶ್ವರದಲ್ಲಿರುವ ಅನನ್ಯ ಪರಿಸರ ವ್ಯವಸ್ಥೆಗಳ ಸಂರಕ್ಷಣೆ ಹಾಗೂ ಇದು ನಾಶವಾಗುತ್ತಿರುವ ವಿಷಯ ಕುರಿತು ಮಂಡಳಿಯ ಸದಸ್ಯರಾದ ಡಾ. ಪ್ರಕಾಶ್ ಮೇಸ್ತ್ರಾರವರು ಸಭೆಗೆ ಮಾಹಿತಿಯನ್ನು ತಿಳಿಸಿದರು.<br><br>ಪರಿಸರ ಸಂರಕ್ಷಣೆಗಾಗಿ ಬಂದರು ಇಲಾಖೆಯು ಸಹ ಒಂದು ಯೋಜನೆಯನ್ನು ಜಾರಿಗೊಳಿಸುತ್ತಿದೆ. ಈ ಇಲಾಖೆಯವರು ಕೃತಕ ಮರಳು ದಿಬ್ಬಗಳನ್ನು ರಚಿಸುತ್ತಿದ್ದಾರೆ. ಅಂದರೆ ರಾಜ್ಯದ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರದಿಂದ (ಎಸ್.ಐ.ಇ.ಎ.ಎ) (**SIEAA**) ಅನುಮತಿ ಪಡೆದ ನಂತರ ಕೃತಕ ಮರಳು ದಿಬ್ಬಗಳನ್ನು ರಚಿಸಲು ಭೂಮಿಯ ಸಾಗಣೆಗಳನ್ನು ಬಳಸಿ ಇಂಟರ್‌ಟೈಡಲ್ ಪ್ರದೇಶದಿಂದ ಮರಳನ್ನು ತೆಗೆಯಲಾಗುತ್ತದೆ. ಈ ಯೋಜನೆಯನ್ನು ಆಲಿವ್ ರಿಡ್ಲೆ ಆಮೆ ಗೂಡುಕಟ್ಟುವ ಪ್ರದೇಶದಲ್ಲಿ ಜಾರಿಗೆ ತರಲಾಗಿದ್ದು, ಇದು ಆಲಿವ್ ರಿಡ್ಲೀಸ್‌ನ ಸಂತಾನೋತ್ಪತ್ತಿ ಚಟುವಟಿಕೆಗೆ ಹಾನಿಕಾರಕವಾಗಿದ್ದು, ಇದು |

| | |
|---|---|
| | ಐಯುಸಿಎನ್‌ನ (**IUCN**)‘ದುರ್ಬಲ’ ಅಳಿವಿನಂಚಿನ ವಿಭಾಗದಲ್ಲಿದೆ. ಸಮಾನಂತರವಾಗಿ, ಆಮೆಗಳು ಗೂಡುಕಟ್ಟುವ/ಸಂತಾನೋತ್ಪತ್ತಿ ಮಾಡುವ ಸ್ಥಳ ಗಳನ್ನು ರಕ್ಷಿಸುವ ಪ್ರಯತ್ನವನ್ನು ಅರಣ್ಯ ಇಲಾಖೆಯು ಮಾಡುತ್ತಿದೆ. ಇಂಟರ್‌ಟೈಡಲ್ ವಲಯದಲ್ಲಿನ ಮರಳು ಸೂಕ್ಷ್ಮ ಮತ್ತು ಸ್ಥೂಲ ಪ್ರಾಣಿಗಳಿಂದ ಸಮೃದ್ಧವಾಗಿದೆ ಎಂದು ಡಾ. ಪ್ರಕಾಶ್ ಮೇಸ್ತಾರವರು ಮಾಹಿತಿ ನೀಡಿದರು.<br><br>ಆದ್ದರಿಂದ ಈ ಮರಳನ್ನು ತೆಗೆಯುವುದು ಮತ್ತು ವರ್ಗಾವಣೆ ಮಾಡುವುದು ವೈಜ್ಞಾನಿಕವಲ್ಲ.ಪರಿಸರ ವ್ಯವಸ್ಥೆಗಳಿಗೆ ಹಾನಿಯನ್ನು ಉಂಟುಮಾಡುವ ಯಾವುದೇ ಕಾರ್ಯಗಳನ್ನು ಕೈಗೊಳ್ಳಬಾರದು ಎಂಬ ಷರತ್ತಿನಡಿಯಲ್ಲಿ ಎಸ್‌ಇಎಎ ಅನುಮತಿ ನೀಡಿದೆ. ಯೋಜನೆಯ ಪ್ರತಿಪಾದಕನು ನಿರ್ಧಿಷ್ಟ ಪ್ರದೇಶಕ್ಕೆ ಎಸ್‌ಇಎಎಯಿಂದ ಅನುಮತಿಯನ್ನು ಪಡೆಯುತ್ತಾನೆ ಆದರೆ ಪ್ರಸ್ತಾವಿತ ಪ್ರದೇಶಕ್ಕಿಂತಲೂ ಮುಂದಿರುವ ಪ್ರದೇಶದಲ್ಲಿ ಯೋಜನೆಯನ್ನು ಕೌಶಲ್ಯದಿಂದ ಕಾರ್ಯಗತಗೊಳಿಸಲಾಗಿರುವುದನ್ನು ಗಮನಿಸಲಾಗಿದೆ. ಇದರ ಪರಿಣಾಮವಾಗಿ ಪ್ರಾಚೀನ ಆವಾಸಸ್ಥಾನಗಳು ನಾಶವಾಗುತ್ತವೆ.<br><br>ಆಮೆ ಗೂಡುಕಟ್ಟುವ / ಸಂತಾನೋತ್ಪತ್ತಿ ಚಟುವಟಿಕೆಯ ಪ್ರದೇಶವನ್ನು **WLPA,** 1972ರ ವ್ಯಾಪ್ತಿಯಲ್ಲಿ ಕೆಎಫ್‌ಡಿ ಮೇಲ್ವಿಚಾರಣೆ ಮಾಡುತ್ತದೆ ಮತ್ತು ರಕ್ಷಿಸುತ್ತದೆ, ಇದಕ್ಕೆ ವಿರುದ್ಧವಾಗಿ ಬಂದರು ಇಲಾಖೆಯು ಯೋಜನೆಯನ್ನು ಜಾರಿಗೆ ತಂದಿದೆ ಎಂಬ ಅಂಶವನ್ನು ಮಂಡಳಿಯ ಅಧ್ಯಕ್ಷರು ಗಮನಿದರು, ಈ ವಿಷಯದ ಕುರಿತು ವಿವರವಾಗಿ ಚರ್ಚಿಸಲಾಯಿತು. ಮಂಡಳಿಯು ಇದರ ನಿಯಂತ್ರಣಕ್ಕೆ ನೇರವಾಗಿ ಸಂಬಂಧಿಸಿಲ್ಲವಾದ್ದರಿಂದ ಈ ಚಟುವಟಿಕೆಯನ್ನು ತಡೆಗಟ್ಟಲು ಮತ್ತು ಧಾರೇಶ್ವರ ರಾಕಿ ಶೋರ್ಸ್‌ನಲ್ಲಿ ಆಮೆ ಆವಾಸಸ್ಥಾನವನ್ನು ಸಂರಕ್ಷಿಸುವ ಅಗತ್ಯ ಕ್ರಮಕ್ಕಾಗಿ ಪ್ರಾದೇಶಿಕ ಪರಿಸರ ಸಚಿವಾಲಯ, ಪರಿಸರ ಸಚಿವಾಲಯದ ಇಲಾಖೆಗೆ ಸಲಹೆ ನೀಡಲು ಸಭೆಯು ತೀರ್ಮಾನಿಸಲಾಯಿತು.<br><br>ಉಪಸ್ಥಿತರಿದ್ದ ಪ್ರಧಾನ ಕಾರ್ಯದರ್ಶಿಗಳ (ಜೀ. ಮತ್ತು ಪ) ಗಮನ ಸೆಳೆಯಲಾಯಿತು. |

| | |
|---|---|
| **46/17:Providing protection to Government and Forest areas:** | ಶ್ರೀ. ಕೆ. ವೆಂಕಟೇಶ್, ಮಂಡಳಿಯ ಅಧಿಕಾರೇತರ ಸದಸ್ಯರು ಮಲೆನಾಡಿನ ಸರಹದ್ದಿನಲ್ಲಿ ಅನೇಕ ಸರ್ಕಾರಿ ಮತ್ತು ಅರಣ್ಯ ಪ್ರದೇಶಗಳಿವೆ. ಇವುಗಳನ್ನು ಡೀಮ್ಡ್ ಅರಣ್ಯ ಎಂದು ಸೂಚಿಸಲಾಗುತ್ತದೆ. ಏಕೆಂದರೆ ಅವುಗಳನ್ನು ಸ್ವಲ್ಪಮಟ್ಟಿಗೆ ರಕ್ಷಿಸಲಾಗಿದೆ. ಆದರೆ ಹಲವಾರು ವರ್ಷಗಳಿಂದ ಶುಂಠಿ ಮತ್ತು ಅರಿಶಿನವನ್ನು ಬೆಳೆಸುವುದರಿಂದ ಮಲೆನಾಡು ಪ್ರದೇಶದ ಈ ಡೀಮ್ಡ್ ಅರಣ್ಯಗಳಲ್ಲಿ ಸಾಕಷ್ಟು ಕೀಟನಾಶಕಗಳು ಮತ್ತು ರಸಗೊಬ್ಬರಗಳನ್ನು ಹಾಕಲಾಗುತ್ತಿದೆ. ಇಲ್ಲಿಯವರೆಗೆ ಡೀಮ್ಡ್ ಕಾಡುಗಳ ಗಡಿಗಳನ್ನು ಗುರುತಿಸಿ ಅಂಚಿನ ನೆಡು ತೋಟಗಳಿಂದ ರಕ್ಷಿಸಲಾಗುತ್ತಿದೆ. ಈ ಗಡಿ ಪ್ರದೇಶಗಳನ್ನು ಕಂದಕ ಮಾಡುವ ಮೂಲಕ ಈ ಎಲ್ಲಾ ಡೀಮ್ಡ್ ಅರಣ್ಯಗಳಿಗೆ ಹೆಚ್ಚಿನ ರಕ್ಷಣೆಬೇಕು ಎಂದು ಶ್ರೀ ಕೆ. ವೆಂಕಟೇಶ್‌ರವರ ತಿಳಿಸಿದರು. ಇದು ಕೀಟನಾಶಕಗಳು/ರಸಗೊಬ್ಬರಗಳ ಒಳಹರಿವನ್ನು ತಡೆಯುವುದಲ್ಲದೆ. ಡೀಮ್ಡ್ ಅರಣ್ಯಗಳ ಅತಿಕ್ರಮಣವನ್ನು ತಡೆಯುತ್ತದೆ. ಕಂದಕವು ಕಾಡು ಪ್ರಾಣಿಗಳನ್ನು ಮಾನವ ವಸಾಹತುಗಳಿಗೆ ಪ್ರವೇಶಿಸುವುದನ್ನು ತಡೆಯುತ್ತದೆ. ಹೀಗಾಗಿ ಮಾನವ-ಪ್ರಾಣಿ ಸಂಘರ್ಷಗಳನ್ನು ತಗ್ಗಿಸುತ್ತದೆ.<br><br>ಮಂಡಳಿಯು ಈ ಬಗ್ಗೆ ಕಾನು ಸಂರಕ್ಷಣೆ ಕುರಿತು ಸಭೆ ನಡೆಸಿ ಶಿಫಾರಸ್ಸು ಕೈಗೊಂಡಿದ್ದನ್ನು ಅಧ್ಯಕ್ಷರು ಉಲ್ಲೇಖಿಸಿದರು. ಮಂಡಳಿಯು ಈ ಬಗ್ಗೆ ಅರಣ್ಯ ಇಲಾಖೆಗೆ ಶಿಫಾರಸ್ಸು ಮಾಡಬೇಕೆಂದು ಅಭಿಪ್ರಾಯ ನೀಡಿತು.<br><br>ಮಂಡಳಿಯು ಕಾಂಪಾ ವಿಶೇಷ ಅನುದಾನವನ್ನು ಕಾನು ಅರಣ್ಯ ಸಂರಕ್ಷಣೆ ಯೋಜನೆಗೆ ನೀಡಲು ಅಗತ್ಯ ಕ್ರಮಕೈಗೊಳ್ಳಲು ಅರಣ್ಯ ಇಲಾಖೆಗೆ ಶಿಫಾರಸ್ಸು ಮಾಡಿತು. ಈ ಬಗ್ಗೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಆಧ್ಯತೆ ನೀಡುವ ಭರವಸೆ ನೀಡಿದರು. |
| **46/18: Updation of Coastal Zone Management Plan Maps:** | ಸರ್ವೆ ಆಫ್ ಇಂಡಿಯಾ (ಎಸ್.ಒ.ಐ), ನೇವಲ್ ಹೈಡ್ರಾಲಜಿ, ಸಿದ್ದಪಡಿಸಿದ ಪ್ರಸ್ತುತ ಕರಾವಳಿ ವಲಯ ನಿರ್ವಹಣಾ ಯೋಜನೆ ನಕ್ಷೆಗಳು, ಜೀವವೈವಿಧ್ಯ ದಾಖಲಾತಿಗಳು ಹಾಗೂ ಎಲ್ಲಾ ಸಸ್ಯಗಳ ಮತ್ತು |

| | |
|---|---|
| | ಪ್ರಾಣಿಗಳ ಪಟ್ಟಿಯೊಂದಿಗಿನ ಪ್ರಸ್ತುತ ಸ್ಥಿತಿಯ ದತ್ತಾಂಶಗಳನ್ನು ನವೀಕರಿಸಿರುವುದಿಲ್ಲ ಎಂದು ಡಾ. ಪ್ರಕಾಶ್ ಮೇಸ್ತಾ ಸಭೆಗೆ ತಿಳಿಸಿದರು. ಎಲ್ಲಾ ಜಿಲ್ಲೆಗಳ ನವೀಕರಿಸಿದ ನಕ್ಷೆಯನ್ನು ಸಿದ್ಧಪಡಿಸಲು **SICON India Pvt. Ltd.** ಈಗಾಗಲೇ ಈ ಯೋಜನೆಯನ್ನು ಮಂಜೂರು ಮಾಡಿದೆ ಎಂದು ಪ್ರಧಾನ ಕಾರ್ಯದರ್ಶಿಗಳು (ಜೀವಿಪರಿಸ್ಥಿತಿ ಮತ್ತು ಪರಿಸರ) ಸಲಹೆಯನ್ನು ನೀಡಿದರು. ನಕ್ಷೆಗಳನ್ನು ಸಿದ್ಧಪಡಿಸಿ ನಮಗೆ ಸಲ್ಲಿಸಿದ ನಂತರ ಅದನ್ನು ಮಂಡಳಿಯ ಮುಂದಿನ ಸಭೆಯಲ್ಲಿ ಚರ್ಚೆಗೆ ಇಡಬಹುದು. ಸಂರಕ್ಷಣೆ ಮತ್ತು ನಿರ್ವಹಣೆಗೆ ಸಂಬಂಧಿಸಿದ ಎಲ್ಲಾ ಕರಾವಳಿ ಸಮಸ್ಯೆಗಳ ಕುರಿತು ಚರ್ಚಿಸಲು ಅರಣ್ಯ ಇಲಾಖೆ, ಸಿಆರ್‌ಜೆಡ್, ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಸ್ಥಳೀಯ ಪರಿಸರ ಕಾರ್ಯಕರ್ತರನ್ನು ಒಳಗೊಂಡ ಸಭೆಯನ್ನು ಹಮ್ಮಿಕೊಳ್ಳುವ ಅಗತ್ಯವಿದೆ ಎಂದು ಮಂಡಳಿಯ ಮಾನ್ಯ ಅಧ್ಯಕ್ಷರು ಸಲಹೆಯನ್ನು ನೀಡಿದರು. |
| **46/19: Extension of project duration for the project titled "Establishment of herbarium and botanical museum of the plants of Western Ghats at Pilikula Nisargadhama".** | ಈ ಯೋಜನೆ ಕುರಿತು ದಿನಾಂಕ 31/01/2020ರಂದು ನಡೆದ ಮಂಡಳಿಯ 43ನೇ ಸಭೆಯಲ್ಲಿ ಚರ್ಚಿಸಿ 2020ರ ಜುಲೈವರೆಗೆ ಯೋಜನೆಯನ್ನು ವಿಸ್ತರಿಸಲು ಅನುಮೋದನೆ ನೀಡಿತ್ತು. ಯೋಜನೆಯ ಪ್ರಧಾನ ಅಧಿಕಾರಿ-ಗಳೊಂದಿಗಿನ ಪತ್ರವ್ಯವಹಾರಗಳು ಹಾಗೂ ಸಂಶೋಧನೆಯ ತಾಂತ್ರಿಕ ತಜ್ಞರ ಸಮಿತಿಯ ಎಲ್ಲಾ ಸಲಹೆಗಳ ಆಧಾರದ ಮೇಲೆ ಅಧ್ಯಯನದ ಅಂತಿಮ ಕರಡು ವರದಿಯನ್ನು ಸಲ್ಲಿಸಿರುತ್ತಾರೆ. ಮಂಡಳಿಯ ಸದಸ್ಯರುಗಳ ಅಧಿಕಾರವಾಧಿಯನ್ನು ರದ್ದುಪಡಿಸಲಾದ ಹಿನ್ನಲೆಯಲ್ಲಿ ಮಂಡಳಿಯ ಸಂಶೋಧನೆಯ ತಾಂತ್ರಿಕ ತಜ್ಞರ ಸಮಿತಿಯನ್ನೂ ಸಹ ರದ್ದುಪಡಿಸಲಾಯಿತು. ಆದ್ದರಿಂದ ವರದಿಯನ್ನು ಅಂತಿಮಗೊಳಿಸಲು ಮತ್ತು ಅನುಮೋದಿಸಲು ಸಾಧ್ಯವಾಗಲಿಲ್ಲ. ಈ ವಿಷಯದಲ್ಲಿ ಮತ್ತಷ್ಟು ವಿಳಂಬವಾಗದಂತೆ ಮಂಡಳಿಯ ಮಾನ್ಯ ಅಧ್ಯಕ್ಷರು ದಿನಾಂಕ 03/10/2020ರಂದು ಕರಡನ್ನು ಪರಿಶೀಲಿಸಲು ಪಿಲಿಕುಳ ನಿಸರ್ಗಧಾಮ ಸಂಸ್ಥೆಗೆ ಭೇಟಿ ನೀಡಿ ಸಭೆಯನ್ನು ನಡೆಸಿದರು. ಅಂತಿಮ |

| | |
|---|---|
| | ವರದಿಯನ್ನು ಅನುಮೋದಿಸಲಾಗಿದೆ. ಉಳಿಕೆ ಮೊತ್ತವನ್ನು ಬಿಡುಗಡೆ ಮಾಡುವ ಮುನ್ನ ಪ್ರಧಾನ ಯೋಜನಾಧಿಕಾರಿಗಳು ಅನುಮೋದಿತ ವರದಿಯ 10 ಪ್ರತಿಗಳನ್ನು ಮಂಡಳಿಗೆ ಸಲ್ಲಿಸಬೇಕು. ಈ ನಿಟ್ಟಿನಲ್ಲಿ ಅಂತಿಮ ವರದಿಗಳನ್ನು ಸ್ವೀಕರಿಸಲು ಮತ್ತು ಉಳಿದ ಬಾಕಿಗಳನ್ನು ಬಿಡುಗಡೆ ಮಾಡಲು ಸಮಯವನ್ನು ಪರಿಗಣಿಸಿ, ಮಂಡಳಿಯು ಯೋಜನೆಯ ಅವಧಿಯನ್ನು 2021ರ ಫೆಬ್ರವರಿಯವರೆಗೆ ವಿಸ್ತರಿಸಲು ಸಭೆಯು ಅನುಮೋದಿಸಿತು. |

ಪ್ರತಿನಿಧಿಗಳ ಬದಲಾಗಿ ನಾಮನಿರ್ದೇಶಿತಗೊಂಡ ಪದನಿಮಿತ್ತ ಸದಸ್ಯರುಗಳು ಮಂಡಳಿಯ ಸಭೆಯಲ್ಲಿ ಹಾಜರಾಗುವಂತೆ ಕೋರಬೇಕೆಂದು ಮಾನ್ಯ ಅಧ್ಯಕ್ಷರು ಸಭೆಗೆ ಶಿಫಾರಸ್ಸು ಮಾಡಿದರು.

ಮಂಡಳಿಯು ಸರ್ಕಾರಕ್ಕೆ ಕಳುಹಿಸಿದ ಎಲ್ಲಾ ಪ್ರಸ್ತಾವನೆಗಳನ್ನು ಸಚಿವಾಲಯದಲ್ಲಿ ತ್ವರಿತಗೊಳಿಸಬೇಕೆಂದು ಸಭೆಯು ತೀರ್ಮಾನಿಸಿತು.

ಅಂತಿಮವಾಗಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರಿಗೆ ಮಾನ್ಯ ಅಧ್ಯಕ್ಷರು ಹಾಗೂ ಸದಸ್ಯ ಕಾರ್ಯದರ್ಶಿಗಳು ವಂದಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/-
ಅಧ್ಯಕ್ಷರು
ಕರ್ನಾಟಕ ಜೀವವೈವಿಧ್ಯ ಮಂಡಳಿ

ಸಹಿ/-
ಸದಸ್ಯ ಕಾರ್ಯದರ್ಶಿ
ಕರ್ನಾಟಕ ಜೀವವೈವಿಧ್ಯ ಮಂಡಳಿ